# ಪುಣ್ಯ-ಪಾಪ ಮತ್ತು ಪಾಪದ ಪ್ರಾಯಶ್ಚಿತ್ತ

## ಮನೋಗತ

ಜೀವನವು ಕರ್ಮಮಯವಾಗಿದೆ ಮತ್ತು ಪ್ರತಿಯೊಂದು ಕರ್ಮಕ್ಕೆ ಫಲವು ನಿಶ್ಚಿತವಾಗಿದೆ. ಒಳ್ಳೆಯ ಕರ್ಮಗಳನ್ನು ಮಾಡಿದರೆ ಪುಣ್ಯವು ದೊರಕಿ ಸುಖವು ಸಿಗುತ್ತದೆ ಮತ್ತು ಕೆಟ್ಟ ಕರ್ಮಗಳನ್ನು ಮಾಡಿದರೆ ಪಾಪದಿಂದ ದುಃಖವು ಸಿಗುತ್ತದೆ. ಬಹಳಷ್ಟು ಸಲ 'ಸದಾಚರಣಿ ಸಜ್ಜನರೂ ಜೀವನದಲ್ಲಿ ದುಃಖವನ್ನು ಭೋಗಿಸುತ್ತಾರೆ ಮತ್ತು ಗೂಂಡಾ, ಭ್ರಷ್ಟಾಚಾರಿ ಇತ್ಯಾದಿ ಜನರು ಕೆಟ್ಟ ಕರ್ಮಗಳನ್ನು ಮಾಡುತ್ತಿದ್ದರೂ ಐಶ್ವರ್ಯಾದಿ ಸುಖಗಳನ್ನು ಭೋಗಿಸುತ್ತಿರುವುದನ್ನು' ನಾವು ನೋಡುತ್ತೇವೆ. ಇಂತಹ ದುರ್ಜನರಿಗೆ ಅವರ ಪಾಪದ ಫಲವು ಏಕೆ ಸಿಗುವುದಿಲ್ಲ ಎಂಬ ಪ್ರಶ್ನೆಯು ಯಾರದಾದರೂ ಮನಸ್ಸಿನಲ್ಲಿ ಬರಬಹುದು. ಇಂತಹ ದುರ್ಜನರಿಗೆ ಅವರ ಪೂರ್ವಪುಣ್ಯದ ಫಲವೆಂದು ಸುಖವು ಸಿಗುತ್ತಿರುತ್ತದೆ. ಅವರ ಪೂರ್ವಪುಣ್ಯವು ಮುಗಿದ ಮೇಲೆ ಅವರ ಪಾಪಕರ್ಮಗಳ ಫಲ ಅಂದರೆ ರೋಗಗಳು, ದಾರಿದ್ರ್ಯ, ಅನೇಕ ದುಃಖಗಳು ಮತ್ತು ಮೃತ್ಯುವಿನ ನಂತರ ನರಕವಾಸ ಇತ್ಯಾದಿಗಳನ್ನು ಅವರಿಗೆ ಭೋಗಿಸಲೇಬೇಕಾಗುತ್ತದೆ. ಇವುಗಳಿಂದ ಯಾರೂ ಬಿಡುಗಡೆ ಯಾಗಲು ಸಾಧ್ಯವಿಲ್ಲ. ಆದುದರಿಂದ ನಮ್ಮ ಪಾಪವನ್ನು ಕಡಿಮೆ ಮಾಡಿಕೊಳ್ಳುವುದು ಆವಶ್ಯಕವಾಗಿದೆ. ದೈನಂದಿನ ಜೀವನದಲ್ಲಿ ಮನುಷ್ಯನಿಂದ ತಿಳಿಯದೇ ಪಾಪಕರ್ಮಗಳು ಸತತವಾಗಿ ಘಟಿಸುತ್ತಿರುತ್ತವೆ, ಉದಾ. ಪೊರಕೆಯಿಂದ ಮನೆ ಗುಡಿಸುವಾಗ ಕ್ರಿಮಿಕೀಟಗಳು ಸಾಯುವುದು, ಇತರರೊಂದಿಗೆ ಕಠೋರವಾಗಿ ಮಾತನಾಡುವುದು, ಇತರರನ್ನು ದ್ವೇಷಿಸುವುದು ಇತ್ಯಾದಿ. ಸ್ವಲ್ಪದರಲ್ಲಿ ಹೇಳುವುದಾದರೆ ಮನುಷ್ಯನಿಗೆ ಪಾಪ ತಡೆಗಟ್ಟುವುದು ಅಸಾಧ್ಯವಾಗಿದೆ. ಪಾಪವನ್ನು ಕಡಿಮೆ ಮಾಡಿಕೊಳ್ಳಲು ನಮಗೆ ಪಾಪಕರ್ಮದ ಪಶ್ಚಾತ್ತಾಪ ವಾಗುವುದು ಮತ್ತು ಧರ್ಮವು ಹೇಳಿದ ಶಿಕ್ಷೆಯನ್ನು ಭೋಗಿಸುವುದಕ್ಕೆ 'ಪ್ರಾಯಶ್ಚಿತ್ತ' ವೆನ್ನುತ್ತಾರೆ. ಈ ಗ್ರಂಥದಲ್ಲಿ, ಪಾಪವು ತಗಲುವ ಮತ್ತು ತಗಲದಿರುವ ವಿವಿಧ ಕಾರಣಗಳು, ಪ್ರಾಯಶ್ಚಿತ್ತ ಕರ್ಮಗಳು, ಪುಣ್ಯವನ್ನು ಹೆಚ್ಚಿಸುವುದರ ಮಹತ್ವ ಮತ್ತು ಪುಣ್ಯವನ್ನು ನಿರ್ಮಿಸುವ ಕರ್ಮಗಳ ಬಗ್ಗೆ ಮಾರ್ಗದರ್ಶನವನ್ನು ಮಾಡಲಾಗಿದೆ.

ಪಾಪ-ಪುಣ್ಯಗಳಿಂದ ನಿರ್ಮಾಣವಾಗುವ ಸುಖ-ದುಃಖಗಳ ಬಂಧನದ ಆಚೆಗೆ ಹೋಗಿ ಸತತವಾಗಿ ಸಚ್ಚಿದಾನಂದ ಅವಸ್ಥೆಯಲ್ಲಿ ಇರಬೇಕಾದರೆ ನಮಗೆ ಯಾವುದೇ ಫಲ ಸಿಗದಂತಹ ಕರ್ಮಗಳನ್ನು ಮಾಡಬೇಕಾಗುತ್ತದೆ. ಕರ್ಮಫಲವನ್ನು ಹೇಗೆ ತ್ಯಾಗ ಮಾಡಬೇಕು, ಇದರ ಬಗ್ಗೆಯೂ ಈ ಗ್ರಂಥದಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ.

ಈ ಗ್ರಂಥವನ್ನು ಓದಿ ವಾಚಕರಿಗೆ ಪಾಪ-ಪುಣ್ಯದ ಕಡೆಗೆ ನೋಡುವ ಒಂದು ಹೊಸ ದೃಷ್ಟಿಯು ಸಿಗಲಿ ಮತ್ತು ಅವರು ಪಾಪ-ಪುಣ್ಯದ ಆಚೆಗೆ ಹೋಗಿ ಆನಂದಪ್ರಾಪ್ತಿ ಯನ್ನು ಮಾಡಿಕೊಳ್ಳಲು ಅವರಿಗೆ ಸಾಧನೆಯನ್ನು ಮಾಡುವ ಪ್ರೇರಣೆ ಸಿಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. - **ಸಂಕಲನಕಾರರು**

# ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


೧. **ಕರ್ಮದ ಪರಿಣಾಮಗಳು :** ಸುಖ ಮತ್ತು ದುಃಖ; ಸಂಸ್ಕಾರ; ಪಾಪ-ಪುಣ್ಯ ಮತ್ತು ಅಹಂಭಾವ ಅಥವಾ ಕೀಳರಿಮೆ ೧೫

೨. **ಪುಣ್ಯ** ೧೬

* ವ್ಯಾಖ್ಯೆ ೧೬
* ಪುಣ್ಯ ಸಿಗುವ ವಿಷಯಗಳು ೧೭
* ಪೂರ್ವಪುಣ್ಯದಿಂದ ಪ್ರಾಪ್ತವಾಗುವ ವಿಷಯಗಳು ೧೮
* ಪುಣ್ಯದ ವಿಧಗಳು - ಶುದ್ಧ ಪುಣ್ಯ ಮತ್ತು ಅಶುದ್ಧ ಪುಣ್ಯ ೧೯
* ಪುಣ್ಯದ ಪರಿಣಾಮಗಳು ೨೧
* ಪುಣ್ಯವು ಮುಗಿದಿರುವುದರ ಲಕ್ಷಣಗಳು ೨೨
* ಸಾಧನೆಯನ್ನು ಮಾಡಿ ಪುಣ್ಯವನ್ನು ಹೆಚ್ಚಿಸಿಕೊಳ್ಳುವುದರ ಮಹತ್ವ ೨೨

೩. **ಪಾಪ** ೨೫

* ವ್ಯಾಖ್ಯೆ ೨೫
* ವ್ಯವಹಾರದಲ್ಲಿ ಪಾಪಗಳನ್ನು ತಡೆಗಟ್ಟುವುದು ಅಸಾಧ್ಯವಾಗಿರುವುದು ೨೫
* ಪಾಪದ ಕಾರಣಗಳು ೨೬
* ಪಾಪದ ವಿಧಗಳು ೩೨
* ಪಾಪದ ತೀವ್ರತೆಗನುಸಾರ ಮೃತ್ಯುವಿನ ನಂತರ ಭೋಗಿಸಬೇಕಾಗುವ ಭೋಗಗಳು ಮತ್ತು ಸಿಗುವ ಜನ್ಮಗಳು ೪೮
* ಸಮಷ್ಟಿ ಪಾಪ ಮತ್ತು ಯುದ್ಧ ಹಾಗೂ ನೈಸರ್ಗಿಕ ಆಪತ್ತುಗಳು ೬೬
* ಪಾಪದ ಮಹತ್ವ ೬೮
* ಪಾಪ ತಗಲದಿರುವುದು ೬೮
* ಪಾಪದ ದುಷ್ಪರಿಣಾಮಗಳನ್ನು ಹೇಗೆ ದೂರಗೊಳಿಸಬೇಕು ? ೭೨

೪. **ಪಾಪ-ಪುಣ್ಯ ಇವೆರಡಕ್ಕೆ ಸಂಬಂಧಿಸಿದ ಅಂಶಗಳು** ೯೩

* ಪುಣ್ಯಪ್ರಾಪ್ತಿಗಾಗಿ ಕೇವಲ ವಿಚಾರಗಳು ಸಾಕಾಗುತ್ತವೆ; ಆದರೆ ಪಾಪ ತಗಲಲು ಕೃತಿ ಮಾಡುವುದು ಆವಶ್ಯಕವಾಗಿದೆ ೯೩
* ಪಾಪ ಮತ್ತು ಪುಣ್ಯ ತಗಲುವುದರ ನಿಯಮಗಳು ೯೪
* ಸಂತರ ಪಾಪ ಮತ್ತು ಪುಣ್ಯ ೯೬
* ಪಾಪ-ಪುಣ್ಯಗಳ ಪಾಲುದಾರರು ೯೭

* ‘ಪಾಪ-ಪುಣ್ಯ’ ಇವು ‘ಕೊಡು-ಕೊಳ್ಳುವ’ ಲೆಕ್ಕಾಚಾರಕ್ಕಿಂತಲೂ ಸೂಕ್ಷ್ಮವಾಗಿವೆ ೯೭
* ವಿವಿಧ ಕರ್ಮಗಳು ಮತ್ತು ಪಾಪ-ಪುಣ್ಯಗಳು ೯೮
* ಹಣವನ್ನು ಗಳಿಸುವ ಪದ್ಧತಿ ಮತ್ತು ಖರ್ಚು ಮಾಡುವ ಪದ್ಧತಿಗಳಿಗನುಸಾರ ತಗಲುವ ಪಾಪ ಮತ್ತು ಪುಣ್ಯ ೯೮
* ಪಾಪ-ಪುಣ್ಯ ಮತ್ತು ಆಯುಷ್ಯ ೯೯
* ಪಾಪ-ಪುಣ್ಯಗಳ ಪ್ರಮಾಣಕ್ಕನುಸಾರ ಮೃತ್ಯುವಿನ ನಂತರ ಪ್ರಾಪ್ತವಾಗುವ ಸ್ಥಾನಗಳು ೧೦೦
* ಪಾಪ-ಪುಣ್ಯ ಮತ್ತು ಆಧ್ಯಾತ್ಮಿಕ ಉನ್ನತಿ ೧೦೧
* ಜ್ಞಾನಿ ಪುರುಷನೇ ಪಾಪ-ಪುಣ್ಯಗಳ ಆಚೆಗೆ ಹೋಗಿ ಕರ್ಮವನ್ನು ಮಾಡಬಲ್ಲನು ೧೦೩

**೫. ಕರ್ಮಗಳ ಅನಿವಾರ್ಯತೆ ೧೦೩**

* ಕರ್ಮವು ಸಜೀವ ಮತ್ತು ನಿರ್ಜೀವ ಯಾರಿಗೂ ಬಿಟ್ಟಿಲ್ಲ ೧೦೪
* ವಿವಿಧ ಯೋಗಮಾರ್ಗಗಳಲ್ಲಿ ಕರ್ಮಗಳು ಅನಿವಾರ್ಯವಾಗಿರುವುದು ೧೦೫

**೬. ಕರ್ಮದ ಪರಿಣಾಮಗಳನ್ನು ತಡೆಗಟ್ಟುವ ಉಪಾಯಗಳು ೧೦೫**

**೭. ಕರ್ಮಗಳನ್ನು ಎಲ್ಲಿಯವರೆಗೆ ಮಾಡಬೇಕು ? ೧೦೭**

**೮. ಕರ್ಮಗಳಿಂದ ಬಿಡುಗಡೆ ೧೦೯**

**೯. ಪಾಪ-ಪುಣ್ಯಗಳ ಆಚೆಗೆ ಹೋಗಲು ಸಾಧನೆಯು ಅವಶ್ಯವಾಗಿದೆ ! ೧೦೯**

**ಟಿಪ್ಪಣಿ :** ವಿಷಯವನ್ನು ಪೂರ್ಣಗೊಳಿಸುವ ದೃಷ್ಟಿಯಿಂದ ಗ್ರಂಥದಲ್ಲಿ ಇತರ ಆಧಾರ ಗ್ರಂಥಗಳು ಹಾಗೂ ಲೇಖನಗಳಿಂದ ಕೆಲವು ಅಂಶಗಳನ್ನು ತೆಗೆದುಕೊಳ್ಳಲಾಗಿದೆ, ಇಂತಹ ಅಂಶಗಳ ಕೊನೆಯಲ್ಲಿ ಸಣ್ಣ ಅಕ್ಷರಗಳಲ್ಲಿ ಕಂಸದಲ್ಲಿ ಆಧಾರ ಕ್ರಮಾಂಕಗಳನ್ನು ಹಾಕಲಾಗಿದೆ. ಅವುಗಳ ವಿವರಣೆಯನ್ನು ಗ್ರಂಥದ ಕೊನೆಯಲ್ಲಿ ‘ಆಧಾರ ಸೂಚಿ’ಯಲ್ಲಿ ಕೊಡಲಾಗಿದೆ.

## ಸನಾತನದ ಗ್ರಂಥಗಳಲ್ಲಿ ಸಂಸ್ಕೃತ ಶ್ಲೋಕವನ್ನು ಕೊಡುವುದರ ಕಾರಣಗಳು

ಸಂಸ್ಕೃತವು ದೇವಭಾಷೆಯಾದುದರಿಂದ ಚೈತನ್ಯಮಯವಾಗಿದೆ. ಕೆಟ್ಟ ಶಕ್ತಿಗಳ ತೊಂದರೆಯಿರುವವರಿಗೆ ಆಧ್ಯಾತ್ಮಿಕ ಉಪಾಯಗಳನ್ನು ಮಾಡುವಾಗ ಇದು ತೀವ್ರವಾಗಿ ಅನುಭವಕ್ಕೆ ಬರುತ್ತದೆ. ವಾಚಕರಿಗೆ ಚೈತನ್ಯದ ಲಾಭವಾಗಬೇಕು ಎಂದು ಗ್ರಂಥಗಳಲ್ಲಿ ಸಂಸ್ಕೃತ ಶ್ಲೋಕಗಳನ್ನು ಮುದ್ರಿಸಲಾಗುತ್ತದೆ. ಸಂಸ್ಕೃತ ತಿಳಿಯದಿದ್ದರೂ ಶ್ಲೋಕವನ್ನು ಓದುವ ಪ್ರಯತ್ನವನ್ನು ಮಾಡಬೇಕು. ಅರ್ಥ ತಿಳಿಯದಿದ್ದರೂ ಅದರಲ್ಲಿನ ಚೈತನ್ಯದ ಲಾಭವು ಖಂಡಿತವಾಗಿಯೂ ಆಗುತ್ತದೆ.